ವಿಚಾರದಲ್ಲಿ ಚರ್ಚೆ ಬಂದಾಗ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಈಗ ಚರ್ಚೆ ಮುಗಿದಿದೆ, ವಿವರಣೆ ಮುಗಿದಿದೆ, ಡಿಮಾಂಡ್ಸ್ ಮೇಲೆ ಮತ್ತೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಾಗಿದೆ. ಮುಖ್ಯ ಮಂತ್ರಿಗಳು ನಾನು ಹೇಳಿದ ಮೇಲೆ ಹೋಗಿದ್ದಾರೆ. ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಇನ್ನೂ ಬೇಕಾದಷ್ಟು ಅವಕಾಶಗಳು ಇದೆ. ಯಾರ್ಯಾರು ಮಾತನಾಡಿಲ್ಲ ಅವರು ಯಾರೇ ಇರಲಿ, ಅವರಿಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಜನರಲ್ ಡಿಸ್‌ಕಷನ್ ಇದ್ದಾಗ ಅವರಿಗೆ ಸಮಯ ಮಾಡಿ ಕೊಟ್ಟಂತೆ ಡಿಮಾಂಡ್ಸ್ ಮೇಲೆಯೂ ಕೂಡಾ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಆ ಪ್ರಕಾರ ಅವಕಾಶ ಮಾಡಿಕೊಡುತ್ತೇನೆ. ನೀವು ಕೊಟ್ಟಂತಹ ಅಧಿಕಾರದ ಪ್ರಕಾರ ನಾನು ತೀರ್ಮಾನ ಕೊಟ್ಟಿದ್ದೇನೆ. ಇಲ್ಲಿಗೆ ಈ ವಿಷಯ ಮುಗಿಸಿ ಮುಂದಿನ ಕಲಾಪ ಪ್ರಾರಂಭ ಮಾಡೋಣ, ಈಗ ಪ್ರಶ್ನೋತ್ತರಗಳು.

ಪ್ರಶ್ನೋತ್ತರಗಳು

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಆರು ತಿಂಗಳಿಗಿಂತ ಹೆಚ್ಚು ಅವಧಿಯವರಿಗೆ ಅಮಾನತ್ತಿನಲ್ಲಿ ಇಡಲಾದ ಮಹಾನಗರ ಸಭೆಯ ನೌಕರರ ಮಾಹಿತಿ

೯೦೪. ಶ್ರೀ ಆರ್. ಎಸ್. ಮಾನೆ (ಬೆಳಗಾವಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಆರು ತಿಂಗಳಿಗಿಂತ ಹೆಚ್ಚಿಗೆ ಅಮಾನತ್ತಿನಲ್ಲಿ ಇಟ್ಟಿರುವ ಪರೀಕ್ಷಕರು ಮತ್ತು ಗುಮಾಸ್ತರುಗಳ ಸಂಖ್ಯೆ.

(ಆ) ಅಮಾನತ್ತಿನಲ್ಲಿ ಇಟ್ಟು ಆದೇಶ ಹೊರಡಿಸುವ ಅಧಿಕಾರಿಯವರಾರು

(ಇ) ಸಂಬಂಧಪಟ್ಟ ನೌಕರರ ಮೇಲೆ ಯಾವಾಗ ವಿಚಾರಣೆ ಪ್ರಾರಂಭಿಸಿದೆ

(ಈ) ವಿಚಾರಣೆ ಆಗದಿರುವ ಬಗ್ಗೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

(ಅ) ೩ ಪರೀಕ್ಷಕರು
೩ ದ್ವಿತೀಯ ದರ್ಜೆ ಗುಮಾಸ್ತರು

(ಆ) ಆಯುಕ್ತರು, ಮಹಾನಗರಸಭೆ, ಬೆಳಗಾವಿ

(ಇ)

ಕ್ರಮ ಸಂಖ್ಯೆ	ಅಮಾನತ್ತಿನಲ್ಲಿ ಇಟ್ಟಿರುವವರ ಹೆಸರು	ವಿಚಾರಣೆ ಪ್ರಾರಂಭಿಸಿದ ದಿನಾಂಕ
೧	೨	೩
೧	ಶ್ರೀ ಡಿ. ಎಚ್. ಸದೇಕರ, ದ್ವಿತೀಯ ದರ್ಜೆ ಗುಮಾಸ್ತರು	೨೮ನೇ ಜೂನ್ ೧೯೮೪
೨	ಶ್ರೀ ಜೆ. ಸಿ. ಬಾಳಗಿ, ಆರೋಗ್ಯ ಪರೀಕ್ಷಕರು	೧೮ನೇ ಏಪ್ರಿಲ್ ೧೯೮೫
೩	ಶ್ರೀ ಸಿ. ಬಿ. ಹೊಸಮನಿ, ಆರೋಗ್ಯ ಪರೀಕ್ಷಕರು (ತಿರುಗಿ ಸೇವೆಯಲ್ಲಿ ತೆಗೆದುಕೊಳ್ಳಲಾಗಿದೆ)	೧೮ನೇ ಏಪ್ರಿಲ್ ೧೯೮೫
೪	ಶ್ರೀ ಯು. ಎನ್. ಕುಲಕರ್ಣಿ, ದ್ವಿತೀಯ ದರ್ಜೆ ಗುಮಾಸ್ತರು	೧೯ನೇ ಸೆಪ್ಟೆಂಬರ್ ೧೯೮೪
೫	ಶ್ರೀ ಎನ್. ವೈ. ಮರಡಿಮನಿ, ದ್ವಿತೀಯ ದರ್ಜೆ ಗುಮಾಸ್ತರು	೧೦ನೇ ಡಿಸೆಂಬರ್ ೧೯೮೪
೬	ಶ್ರೀ ಐ. ಆರ್. ನರಗಟ್ಟಿ, ಕಾವಲುಗಾರ ಪರೀಕ್ಷಕರು	೨೩ನೇ ಜುಲೈ ೧೯೮೫

(ಈ) ವಿಚಾರಣಾ ಅಧಿಕಾರಿಗಳಾಗಿ ನೇಮಕಗೊಂಡ ಅಧಿಕಾರಿಗಳು ಮೇಲಿಂದ ಮೇಲೆ ವರ್ಗವಾಗುತ್ತಿರುವುದರಿಂದ ವಿಚಾರಣೆಯಲ್ಲಿ ವಿಳಂಬವಾಗುತ್ತಿದೆ.

SRI A. LAKSHMISAGAR.— I wish to submit further that the enquiries will be expedited and soon a decision will be taken.

SRI R. S. MANE.—To keep employees under suspension for more than six months is against rule 189 of the Karnataka Municipalities (Conditions of Service of Officers and Servants) Rules, 1972. It is admitted that out of six officers only one has been reinstated. I would like to know why the rest of them are not reinstated ? When are they going to reinstate them ?

SRI A. LAKSHMISAGAR.—Action will be taken according to the rules.

ಸವದತ್ತಿ ನಗರದಲ್ಲಿ ಮುನ್ಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯ ಕಟ್ಟಡದ ಬಗ್ಗೆ

*೫೫೨. ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ (ಪರಸಗಡ).— ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸವದತ್ತಿ ನಗರದಲ್ಲಿ ಮುನಸೀಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯ ಕಟ್ಟಡ ಕಟ್ಟುವ ಕೆಲಸ ಆರಂಭವಾಗಿದೆಯೆ,

(ಆ) ಹಾಗಿಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

(ಅ) ಇಲ್ಲ

(ಆ) ಟೆಂಡರುಗಳ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳದೆ ಇರುವುದರಿಂದ

ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿ.—ಮಾನ್ಯ ಅಧ್ಯಕ್ಷರೇ, ಹೋದ ಸಲ ಈ ಪ್ರಶ್ನೆಯನ್ನು ಕೇಳಿದಾಗಲೂ ಸಹ ಮಾನ್ಯ ಮಂತ್ರಿಯವರು ಇದೇ ರೀತಿ ಉತ್ತರವನ್ನು ಕೊಟ್ಟಿದ್ದಾರೆ. ಇದುವರೆಗೂ ಕಟ್ಟಡದ ಕೆಲಸ ಪ್ರಾರಂಭವಾಗಿಲ್ಲ. ಆದ್ದರಿಂದ ಎಂದು ಕಟ್ಟಡ ಪ್ರಾರಂಭವಾಗುತ್ತದೆಂದು ನಿಶ್ಚಿತವಾಗಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಧಿಕಾರಿಗಳ ಮಟ್ಟದಲ್ಲಿ ಇದರ ಬಗ್ಗೆ ಚರ್ಚೆಯಾಗಿ, ಕಟ್ಟಡವನ್ನು ಕಟ್ಟಿಸುವುದಕ್ಕೆ ಟೆಂಡರುಗಳನ್ನು ಕರೆದಿದ್ದೇವೆ. ಟೆಂಡರುಗಳನ್ನು ಸಲ್ಲಿಸುವ ಕೊನೆಯ ದಿನಾಂಕ ೧೦-೩-೧೯೮೬ ಎಂದು ತಿಳಿಸಿದ್ದೇವೆ. ಆದಷ್ಟು ಬೇಗ ಈ ಕೆಲಸವನ್ನು ಮುಗಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ.— ಮಾನ್ಯ ಅಧ್ಯಕ್ಷರೇ, ಸವದತ್ತಿ ನಗರದಲ್ಲಿ ಪ್ರಥಮ ದರ್ಜೆಯ ನ್ಯಾಯಾಲಯದ ಕಟ್ಟಡವನ್ನು ಕಟ್ಟುವುದಕ್ಕೆ ಸರ್ಕಾರದವರು ಯಾವ ಜಾಗವನ್ನು ಅಕ್ವೈಯರ್ ಮಾಡಿಕೊಂಡಿದ್ದಾರೋ, ಆ ಜಾಗದ ಮೇಲೆ ಒಂದು ದೇವಸ್ಥಾನದ ಆಡಳಿತ ಮಂಡಳಿಯವರು ತಕರಾರನ್ನು ಹಾಕಿದ್ದಾರೆ. ಈ ತಕರಾರು ಮಾನ್ಯ ಸಚಿವರಿಗೆ ಗೊತ್ತಿದೆಯೇ ? ಈ ತಕರಾರಿನಿಂದ ಕೆಲಸ ಸ್ಥಗಿತಗೊಂಡಿರುವ ಬಗ್ಗೆ ತಿಳಿದಿದೆಯೆ ? ಅದನ್ನ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರೆಂದು ತಿಳಿಸಬೇಕು.